ಆ) ಹಾಗಿದ್ದಲ್ಲಿ ದುರ್ಬಳಕೆಯಾದ ಹಣದ ಮೊತ್ತವೆಷ್ಟು ?

ಇ) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಈ) ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಡಾ|| ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಆ) ಇಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಹಾಸನ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕುಡಿಯುವ ನೀರಿನ ಯೋಜನೆಯ ಪ್ರಗತಿ

2957 - ಶ್ರೀ ಶಿವರಾಮು ಬಿ. (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಹಾಸನ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನೆರವಿನ ಕುಡಿಯುವ ನೀರಿನ ಯೋಜನೆಯಲ್ಲಿ ಪೂರ್ಣಗೊಂಡಿರುವ ಗ್ರಾಮಗಳ ಸಂಖ್ಯೆ ಎಷ್ಟು ?

ಆ) ನುಗ್ಗೇಹಳ್ಳಿ ಕುಂದೂರು, ಮುದುಡಿ, ಬಾಗೇಶಪುರ ಗಂಡಸಿ ಮತ್ತು ಕೋಳಗುಂದ ಗ್ರಾಮಗಳ ಯೋಜನೆ ಪೂರ್ಣಗೊಂಡಿದೆಯೇ ?

ಇ) ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಗುತ್ತಿಗೆದಾರರು ಯಾರು ?

ಈ) ಗುತ್ತಿಗೆದಾರರಿಗೆ ಪಾವತಿ ಮಾಡಿರುವ ಬಿಲ್ಲಿನ (ಅಂಶವಾರು) ಮೊತ್ತ ಹಾಗೂ ವಾಸ್ತವಿಕ ಕಾಮಗಾರಿಗೆ ಹೊಂದಾಣಿಕೆ ಇದೆಯೇ ? ಇಲ್ಲದಿದ್ದರೆ ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಆ) 88 ಗ್ರಾಮಗಳಲ್ಲಿ ಕಾಮಗಾರಿಗಳು ಪೂರ್ಣಗೊಂಡಿವೆ.

ಆ) ಹೌದು.

ಇ) ಮೆ: ಕೋರಮಂಡಲ, ಪ್ರೆಸ್ಟಕೀಟ್ ಪೈವೇಟ್ ಲಿಮಿಟೆಡ್, ಹೈದರಬಾದ್

ಈ) ಗುತ್ತಿಗೆದಾರರಿಗೆ ಒಟ್ಟು ರೂ.1,00,81,200-00 ಪಾವತಿ ಮಾಡಲಾಗಿದೆ (ಪ್ಯಾಕೇಜಿನ ಉಳಿದ ಎರಡು ಹಳ್ಳಿಗಳ ಕಾಮಗಾರಿಯ ಬಿಲ್ಲಿನ ಮೊತ್ತವು ಸೇರಿ) ಬಿಲ್ಲಿನ ಮೊತ್ತ ಹಾಗೂ ವಾಸ್ತವಿಕ ಕಾಮಗಾರಿಗೆ ಹೊಂದಾಣಿಕೆ ಇದೆ.

ಅಂಶವಾರು ವಿವರಗಳು ಈ ಕೆಳಗಿನಂತಿವೆ.

1) ಪಂಪಿಂಗ್ ಮೆಷಿನರಿ	-	7,58,930,25
2) ಪ್ರಧಾನ ನೀರೆತ್ತುವ ಕೊಳವೆ	-	20,54,231.00
3) ವಿತರಣಾ ಸಿಸ್ಟಂ	-	22,33,122.54
4) ನೀರಿನ ಮೇಲು ತೊಟ್ಟಿ (ಒಹೆಚ್‌ಟಿ)	-	1,79,412.24
5) ಹ್ಯಾಬಿಟೇಟ್ ಡೆವಲಪ್‌ಮೆಂಟ್ ಮತ್ತು ಇತರೆ ಕಾಮಗಾರಿಗಳು	-	28,55,503.97
		ರೂ.1,00,81,200.00

ರಾಜ್ಯದಲ್ಲಿರುವ ಆರೋಗ್ಯ ಕೇಂದ್ರಗಳ ಸಂಖ್ಯೆ

2958 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಎಷ್ಟು ಆರೋಗ್ಯ ಕೇಂದ್ರಗಳು ಇವೆ? (ಪ್ರಾಥಮಿಕ ಆರೋಗ್ಯ ಕೇಂದ್ರ)? ಎಷ್ಟು ಕೇಂದ್ರಗಳು ಡಾಕ್ಟರ್ಸ್ ಮತ್ತು ಸಿಬ್ಬಂದಿಗಳ ಕೊರತೆ ಇದೆ? ಜಿಲ್ಲಾವಾರು ವಿವರ? ಎಷ್ಟು ಕೇಂದ್ರಗಳಿಗೆ ಕಟ್ಟಡಗಳ ಕೊರತೆ ಇವೆ? ಎಷ್ಟು ಕೇಂದ್ರಗಳಿಗೆ ಸಾಮಗ್ರಿಗಳ ಕೊರತೆ ಇದೆ?*

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಈ ಪೈಕಿ 186 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳಿದ್ದು, ಬಹುತೇಕ ಕೇಂದ್ರಗಳಲ್ಲಿ ಕೆಲವೊಂದು ಸಿಬ್ಬಂದಿಗಳ ಕೊರತೆ ಇದೆ. (ಪಟ್ಟಿ ಲಗತ್ತಿಸಿದೆ)

509 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಟ್ಟಡಗಳು ಇರುವುದಿಲ್ಲ, ಕಟ್ಟಡಗಳು ಇಲ್ಲದೇ ಆರೋಗ್ಯ ಕೇಂದ್ರಗಳು ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಸಾಮಗ್ರಿಗಳ ಕೊರತೆಯು ಆಗಿಂದಾಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬದಲಾಗುವುದರಿಂದ ನಿಗಧಿತ ಸಂಖ್ಯೆಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ.